<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ 05-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದಃ-</u>

ನನ್ನ ತಂದೆ ನನ್ನ ತಾಯಿಯನ್ನು ಮದುವೆಯಾಗುವ ಪೂರ್ವದಲ್ಲಿ ಯಾವುದೇ ವ್ಯಾಪಾರ ಮಾಡುತ್ತಿರಲಿಲ್ಲ. ನನ್ನ ತಂದೆಯವರು ಕೆಲಸಕ್ಕೆ ಹೋಗುತ್ತಿದ್ದರು. ನನ್ನ ತಂದೆಯವರು ಸಾಮಿಲ್ ನಲ್ಲಿ ಲೇಬರ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ತಂದೆಯವರು ಮದುವೆಯ ಪೂರ್ವದಲ್ಲಿ ಹಾಗೂ ನಂತರದಲ್ಲಿ ಟಿಂಬರ್ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಮದುವೆಯ ಪೂರ್ವದಲ್ಲಿ ಟಿಂಬರ್ ವ್ಯಾಪಾರ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಮದುವೆಯ ನಂತರ 1987 ರಲ್ಲಿ ನನ್ನ ತಂದೆಯವರು ಟಿಂಬರ್ ವ್ಯಾಪಾರ ಮಾಡಿದ್ದರು. ನಾನು 1986 ಜೂನ್ ನಲ್ಲಿ ಜನಿಸಿರುತ್ತೇನೆ. ನನ್ನ ತಂದೆಯವರು 1987 ರಲ್ಲಿ ಟಿಂಬರ್ ವ್ಯಾಪಾರ ಪ್ರಾರಂಭಿಸಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಹಿಂದಿನಿಂದಲೂ ಟಿಂಬರ್ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ತಾಯಿಯ ತಂದೆಯವರು ಸರ್ಕಾರಿ ಐ.ಟಿ.ಐ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ನನ್ನ ತಾಯಿಯವರು ಒಟ್ಟು 6 ಜನ ಮಕ್ಕಳು. ಅವರು ಮೂರು ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಾಯಿಯ ಅಣ್ಣ ತೀರಿಕೊಂಡಿದ್ದು, ಇಬ್ಬರು ತಮ್ಮಂದಿರ ಪೈಕಿ ಒಬ್ಬ ತಮ್ಮ ತೀರಿಕೊಂಡಿದ್ದು ಒಬ್ಬ ಬದುಕಿರುತ್ತಾರೆ. ಬದುಕಿರುವ ತಮ್ಮನ

ಹೆಸರು ವಿಜಯ್ ಕುಮಾರ್ ಎಂದು ಇದ್ದು ಅವರು ಶಿವಮೊಗ್ಗದಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ತಾಯಿಯ ತಂದೆ ಐ.ಟಿ.ಐ ಶಾಲೆಯಲ್ಲಿ ಶಿಕ್ಷಕರಾಗಿದ್ದರು ಎಂದರೆ ಸಾಕ್ಷಿದಾರರು ಐ.ಟಿ.ಐ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದರು ಎಂದು ನುಡಿಯುತ್ತಾರೆ. ನನ್ನ ಅಜ್ಜ ಅಂದರೆ ತಾಯಿಯ ತಂದೆ ಮೂಲತಃ ಬೆಳಗಾಂನವರು ಎಂದರೆ ಸರಿ. ನನ್ನ ಅಜ್ಜನ ಸಂಬಳದಲ್ಲಿ ಅವರ 6 ಜನ ಮಕ್ಕಳ ವಿದ್ಯಾಭ್ಯಾಸ ಹಾಗೂ ಮನೆಯ ಖರ್ಚನ್ನು ನೋಡಿಕೊಳ್ಳುವುದು ಕಷ್ಟವಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ನನ್ನ ಅಜ್ಜನಿಗೆ ಊರಿನಲ್ಲಿ ಜಮೀನು ಕೂಡಾ ಇತ್ತು. ನನ್ನ ಅಜ್ಜನಿಗೆ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ-ತಾಯಿಯ ಮದುವೆಯ ಖರ್ಚನ್ನು ನನ್ನ ತಂದೆಯೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರಿಯಲ್ ಎಸ್ಟೇಟ್ ವ್ಯವಹಾರ ಹಾಗೂ ತರಕಾರಿಗಳನ್ನು ಪೂನಾ, ಬಾಂಬೆಗೆ ಕಳುಹಿಸುವ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ನನ್ನ ತಂದೆ ಬದುಕಿರುವವರೆಗೆ 1 ನೇ ಪ್ರತಿವಾದಿ ಯಾವುದೇ ವ್ಯಾಪಾರ ಅಥವಾ ಕೆಲಸ ಮಾಡುತ್ತಿರಲಿಲ್ಲ. ನನ್ನ ತಂದೆಯ ಆದಾಯದ ಮೇಲೆ ಅವಲಂಬಿತರಾಗಿದ್ದರು. ನನ್ನ ತಾಯಿಯ ಹೆಸರಿನಲ್ಲಿ ಸೀಮೆಂಟ್ ಏಜೆನ್ಸಿ ಇದ್ದು ಅದನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ಆಗ ನನ್ನ ತಂದೆಯು ಊಟದ ಸಮಯದಲ್ಲಿ ಮನೆಗೆ ಬಂದಾಗ 1 ನೇ ಪ್ರತಿವಾದಿ ಸ್ವಲ್ಪ ಸಮಯ ಹೋಗಿ ಕುಳಿತು ಬರುತ್ತಿದ್ದರು. 1999 ರಿಂದ 1 ನೇ ಪ್ರತಿವಾದಿಯು ರಾಜ್ ಕಿರಣ್ ಹಾರ್ಡ್ ವೇರ್ ಎನ್ನುವ ಸೀಮೆಂಟ್ ಮತ್ತು ಕಬ್ಬಿಣದ ಬ್ಯೂಸಿನೆಸ್ ಅನ್ನು ರಿಯಲ್ ಎಸ್ಟೇಟ್ ಹಾಗೂ

ತರಕಾರಿ ವ್ಯಾಪಾರದ ಜೊತೆಗೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಐಟಂ ನಂ.1 ನ್ನು ನನ್ನ ತಂದೆ ಅವರ ಸ್ವಂತ ದುಡಿಮೆಯಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ21.08.2017 ರಂದು ನನ್ನ ತಂದೆಯವರು 2 ಮತ್ತು 3 ನೇ ಪ್ರತಿವಾದಿಯವರ ಮೇಲಿನ ಪ್ರೀತಿಯಿಂದ ಅವರಿಗೆ ದಾವಾ ಆಸ್ತಿ ಐಟಂ ನಂ.1 ನ್ನು ವಿಲ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ತಂದೆ ನಮ್ಮ ಬಳಿ ಈ ಬಗ್ಗೆ ತಿಳಿಸಿರುವುದಿಲ್ಲ. ನನ್ನ ಮದುವೆ ದಿಃ06.11.2014 ರಂದು ಆಗಿರುತ್ತದೆ. ಸದರಿ ವಿಲ್ ನೊಂದಣಿಯಾಗಿರುತ್ತದೆ ಎಂದರೆ ಸಾಕ್ಷಿದಾರರು ನಾವು 1 ನೇ ಪ್ರತಿವಾದಿಯ ಬಳಿ ನಮ್ಮ ತಂದೆ ತೀರಿದ ನಂತರ ಆಸ್ತಿ ವಿಭಾಗಕ್ಕೆ ಕೇಳಿದಾಗ 1 ನೇ ಪ್ರತಿವಾದಿಯು ವಿಲ್ ನ ಬಗ್ಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಲ್ ನೊಂದಣಿಯಾಗಿರುತ್ತದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ವಿಲ್ ನೊಂದಣಿಯಾಗಿರುವುದರಿಂದ ಸದರಿ ಆಸ್ತಿಯು 2 ಮತ್ತು 3 ನೇ ಪ್ರತಿವಾದಿಯರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ಈಗ ಅವರ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಐಟಂ ನಂ.2 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ತಾಯಿಯವರು ಒಟ್ಟು ಕುಟುಂಬದ ಆಸ್ತಿಯನ್ನು 1 ರಿಂದ 3 ನೇ ಪ್ರತಿವಾದಿಯರಿಗೆ ತಿಳಿಯದ ಹಾಗೆ ನಮ್ಮ ಹೆಸರಿಗೆ ದಾನಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿ

ಆಸ್ತಿಯು ಈ ದಾವೆಗೆ ಸಂಬಂಧಪಟ್ಟ ಆಸ್ತಿ ಇರುವುದಿಲ್ಲ. ಸದರಿ ಆಸ್ತಿಯನ್ನು ನಮ್ಮ ಹೆಸರಿಗೆ ದಾನಪತ್ರ ಮಾಡಲು ನಮ್ಮ ತಾಯಿಯವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿ ಆಸ್ತಿಯ ಬಗ್ಗೆ ಬೇರೆ ದಾವಾ ಇರುತ್ತದೆ. ನನ್ನ ತಂದೆಯು ಡಿಸೆಂಬರ್ 2020 ರಲ್ಲಿ ಮೃತಪಟ್ಟಿದ್ದು ನಂತರ 1 ವರ್ಷದ ನಂತರ ಡಿಸೆಂಬರ್ 2021 ರಲ್ಲಿ 1 ನೇ ಪ್ರತಿವಾದಿಯ ಬಳಿ ಆಸ್ತಿ ವಿಭಾಗದ ಬಗ್ಗೆ ಕೇಳಿರುತ್ತೇವೆ. ಆದರೆ, ದಿನಾಂಕವನ್ನು ಹೇಳಲು ನನಗೆ ನೆನಪಿಲ್ಲ. ಡಿಸೆಂಬರ್ 21 ರಲ್ಲಿ 1 ನೇ ಪ್ರತಿವಾದಿಯ ಬಳಿ ಆಸ್ತಿ ವಿಭಾಗದ ಬಗ್ಗೆ ಕೇಳಿರುತ್ತೇವೆ ಎಂದರೆ ಸರಿಯಲ್ಲ. ದಾನಪತ್ರದ ಬಾಬ್ತು ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ ನಂತರ ಈ ದಾವೆಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ-4 ನೋಟೀಸ್ ಅನ್ನು ಯಾವಾಗ ನೀಡಿರುತ್ತೇವೆ ಎಂದು ಹೇಳಲು ನನಗೆ ಈಗ ನೆನಪಿಲ್ಲ. ದಾವಾ ಆಸ್ತಿ ಐಟಂ ನಂ.1 ನ್ನು 4 ನೇ ಪ್ರತಿವಾದಿಯವರು 2 ಮತ್ತು 3 ನೇ ಪ್ರತಿವಾದಿಯವರಿಗೆ ಖಾತಾ ಬದಲಾವಣೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಪಟ್ಟಿರುವ ದಿನಾಂಕ, ತಿಂಗಳು ಹಾಗೂ ವರ್ಷವನ್ನು ಹೇಳಲು ನನಗೆ ಈಗ ಆಗುವುದಿಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಪಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಮಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ 1 ರಿಂದ 3 ನೇ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ